ಶ್ರೀ ಸಿ. ಬೈರೇಗೌಡ : ನಾಳೆ ದಿವಸ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳ ರೈತರು ತಮ್ಮ ಮನೆ ಮುಂದೆ ಧರಣಿ ಸತ್ಯಾಗ್ರಹ ಮಾಡಬೇಕೆಂದು ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ನಾಳೆ ಬರುತ್ತಿದ್ದಾರೆ. ಪ್ರತಿದಿನ ಇಲ್ಲಿ ವಿದ್ಯುತ್ ಬಗ್ಗೆ ಚರ್ಚೆಯನ್ನು ಮಾಡುತ್ತಲೇ ಇದ್ದೇವೆ. ಆದರೆ ಯಾವುದೇ ಪ್ರಯೋಜನವಾಗಿಲ್ಲವಾದ್ದರಿಂದ ಸರ್ಕಾರ ಇದನ್ನು ತೀವ್ರವಾಗಿ ಪರಿಗಣಿಸಿದಂತೆ ಭಾಸವಾಗುತ್ತಿಲ್ಲ. ಏಕೆಂದರೆ ಪ್ರತಿದಿನ ತೊಂದರೆಯಾಗುತ್ತಲೇ ಇದೆ. ಸದನದ ಸಮಿತಿಯ ವರದಿ ಬಂದಿದೆ, ಆ ವರದಿ ಸರ್ಕಾರದ ಕೈಯಲ್ಲಿದೆ. ನಾವೂ ಕೂಡ ಪ್ರತಿದಿನ ಒತ್ತಾಯ ಮಾಡುತ್ತಿದ್ದೇವೆ. ಇಷ್ಟೆಲ್ಲಾ ಆದರೂ ಕೂಡ ಇನ್ನೂ ತೊಂದರೆ ಜಾಸ್ತಿಯಾಗುತ್ತಿದೆ. ಆದ್ದರಿಂದ ಮಾನ್ಯ ಉಪ ಮುಖ್ಯಮಂತ್ರಿಗಳು ಎಲ್ಲಾದರೂ ಇದ್ದರೆ ಅವರನ್ನು ಕರೆಯಿಸಿ ಒಂದು ಹೇಳಿಕೆಯನ್ನು ಕೊಡಿಸುವುದು ಒಳ್ಳೆಯದು. ರೈತರು ನಾಳೆ ಇಲ್ಲಿಗೆ ಬರತಕ್ಕದ್ದು ತಪ್ಪತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆ ಸಾಧ್ಯವಾದರೆ ಇವತ್ತು ಇಲ್ಲದಿದ್ದರೆ ನಾಳೆ ಮಾತನಾಡಿ ....

ಶ್ರೀ ಸಿ. ಬೈರೇಗೌಡ : ಇವತ್ತು ತಮ್ಮ ಹೇಳಿಕೆ ಏನಾದರೂ ಬಂದರೆ ನಾಳೆ ರೈತರು ಬರುವ ಕಾರ್ಯಕ್ರಮವನ್ನು ಅವರು ರದ್ದುಮಾಡಲೂಬಹುದು. ಆದ್ದರಿಂದ ಈಗಲೇ ಏನಾದರೂ ಹೇಳಿಕೆ ಮಾಡಿಸುವುದಾದರೆ ಮಾಡಿಸಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ : ರೈತರು ಬರುವುದಕ್ಕೆ ಸುಸ್ವಾಗತ. ಅವರು ಬರುವುದನ್ನು ತಡೆಯುವುದಿಲ್ಲ.

ಶ್ರೀ ಸಿ. ಬೈರೇಗೌಡ : ಅವರು ನಾಳೆ ಬರುವುದಕ್ಕೆ ವ್ಯಾಪಕವಾದ ಕಾರ್ಯಕ್ರಮವನ್ನು ಹಾಕಿಕೊಂಡು ತಯಾರಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಒಂದು ಸಮಿತಿಯನ್ನು ಮಾಡಿ ಅದರ ವರದಿಯನ್ನು ಕೂಡ ತರಿಸಿಕೊಂಡಿರಿ. ಮಾನ್ಯ ಉಪ ಮುಖ್ಯ ಮಂತ್ರಿಗಳು ಏನೋ ಅನುಕೂಲ ಮಾಡಿಕೊಡುತ್ತೇವೆಂದು ಹೇಳುತ್ತಿದ್ದಾರೆ. ಅವರು ಯಾವುದಾದರೂ ಒಂದನ್ನು ಪ್ರಕಟಣೆ ಮಾಡಿದರೆ ನಾಳೆ ನಡೆಯತಕ್ಕ ಚಳುವಳಿಯನ್ನು ತಡೆಗಟ್ಟಬಹುದು ಅಷ್ಟೆ. ಇವತ್ತು ಸಂಜೆಯೊಳಗಾಗಿ ಒಂದು ಪರಿಣಾಮಕಾರಿ ಹೇಳಿಕೆಯನ್ನು ಕೊಟ್ಟರೆ ನಾಳೆಯ ಚಳುವಳಿ ನಿಲ್ಲುತ್ತದೆ.

1.15 ಪಿ. ಎಂ.

ಗಮನ ಸೆಳೆಯುವ ಸೂಚನೆ.

ವಿಷಯ : ಗ್ರಾಮಾಂತರ ಅಭ್ಯರ್ಥಿಗಳಿಗೆ ನೀಡುತ್ತಿದ್ದ ಶೇಕಡ 15 ಕೃಪಾಂಕವನ್ನು 15ಕ್ಕೆ ಇಳಿಸಿರುವುದು.

ಶ್ರೀ ವೈ. ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ನೀಡುತ್ತಿದ್ದ ಶೇಕಡಾ 15 ಕೃಪಾಂಕವನ್ನು 15ಕ್ಕೆ ಇಳಿಸಿರುವುದರಿಂದ ಆಗಿರುವ ಅನ್ಯಾಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಲು ಇಷ್ಟಪಡುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇದು ಬಹಳ ಮುಖ್ಯವಾದ ವಿಷಯ, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳೇ ಉತ್ತರವನ್ನು ಕೊಡುತ್ತಾರೆ. ಅವರು ಏನು ಹೇಳುತ್ತಾರೆ ಕೇಳಿ.

ಶ್ರೀ ವೈ. ಕೆ. ರಾಮಯ್ಯ : ಬಹಳ ಮುಖ್ಯವಾದ ವಿಷಯ ಚರ್ಚೆ ಮಾಡಬೇಕೆಂದಿರುವಾಗ ಮಾನ್ಯ ಮುಖ್ಯಮಂತ್ರಿಗಳು ಎದ್ದು ಹೋದರೆ ಏನು ಮಾಡುವುದು?

* ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಹೇಳಿಕೆಯನ್ನು ಕೊಡುತ್ತೇನೆ.

ವಿದಾನ ಸಭೆ ನಿಯಮ 72ರಡಿಯಲ್ಲಿನ ಗಮನ ಸೆಳೆವ ಸೂಚನೆ ಸಂಖ್ಯೆ 171ರಲ್ಲಿ, ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಕೃಪಾಂಕ, ನೀಡುವಲ್ಲಿ ಪುನರ್‌ವಿಮರ್ಶೆ ಮಾಡಲಾಗಿರುವುದರಿಂದ ಆಗಿರುವ ಅನ್ಯಾಯವನ್ನು ಚರ್ಚಿಸಲು ಬಯಸಲಾಗಿದೆ. ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಸಂಬಂಧದಲ್ಲಿ ಈ ಕೆಳಕಂಡಂತೆ ಬದಲಾವಣೆಯಾಗಿದ್ದು ಸದರೀ ವೃಂದಕ್ಕೆ , ಈಗ ಹೆಚ್ಚಿನ ಸಂಖ್ಯೆಯಲ್ಲಿ ನೇಮಕಾತಿ ಮಾಡಿಕೊಳ್ಳುತ್ತಿರುವುದರಿಂದ ಈ ಸಮಸ್ಯೆ ಉದ್ಭವಿಸಿದಂತೆ ಕಂಡು ಬರುತ್ತದೆ.

ಅಧಿಸೂಚನೆ ಸಂಖ್ಯೆ ಇಡಿ 366 ಪಿಎಂಎಸ್ 91 ದಿನಾಂಕ : 24.3.1992 ಪತಾಕೆ (ಎ) ಶಿಕ್ಷಣ ಇಲಾಖೆಯ ವೃಂದ ನೇಮಕಾತಿ ನಿಯಮಗಳಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದಕ್ಕೆ ಸಂಬಂದಿಸಿದಂತೆ ಸಮಗ್ರ ತಿದ್ದುಪಡಿ ತಂದು, ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಗ್ರಾಮಿಣ ಅಭ್ಯರ್ಥಿಗಳಿಗೆ, ಹುದ್ದೆಗೆ ನಿಗದಿಪಡಿಸಿದ ವಿವಿಧ ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿದ ಶೇಕಡವಾರು ಅಂಕಗಳ ಸರಾಸರಿಗೆ 15 ಅಂಕಗಳನ್ನು ಸೇರಿಸಬೇಕೆಂದಿತ್ತು. ಇದರ ಪರಿಣಾಮವಾಗಿ ಗ್ರಾಮಿಣ ಅಭ್ಯರ್ಥಿಗಳಿಗೆ ತಾವು ವಿವಿಧ ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿದ ಶೇಕಡಾವಾರು ಅಂಕಗಳ ಸರಾಸರಿಗೆ ಪ್ರತಿಶತ 15 ಅಂಕಗಳು ಕೃಪಾಂಕವಾಗಿ ದೊರಕುತ್ತದೆ. ಅಧಿಸೂಚನೆ ಸಂಖ್ಯೆ : ಇಡಿ 136 ಪಿಎಂಎಸ್ 92 ದಿನಾಂಕ : 22.2.93 ರಲ್ಲಿ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಪ್ರಾಥಮಿಕ ಶಾಲಾ ಸಹಾಯಕ ವೃಂದಕ್ಕೆ ನೇಮಕಾತಿ) (ವಿಶೇಷ ನೇಮಕಾತಿ) ನಿಯಮಗಳು, 1992ನ್ನು ಜಾರಿಗೆ ತಂದಿದ್ದು, ಈ ನಿಯಮಗಳು ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು, 1967 ರ ವ್ಯವಸ್ಥೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುತ್ತದೆ. ದಿನಾಂಕ : 22.2.93ರ ನಿಯಮಾವಳಿಯು ಒಂದು ನೇಮಕಾತಿಗೆ ಮಾತ್ರ ಅನ್ವಯವಾಗುವ ವ್ಯವಸ್ಥೆ ಮಾಡಲಾಗಿದ್ದು, ಆ ನಿಯಮಗಳ ಪ್ರಕಾರ ಒಂದು ಬಾರಿಗೆ ನೇಮಕಾತಿಯಾದ ಕೂಡಲೇ ನಿಯಮಗಳು ಸ್ವಯಂಚಾಲಿತವಾಗಿ ತಮ್ಮ ಚಾಲನೆಯನ್ನು ಕಳೆದುಕೊಳ್ಳುತ್ತದೆ. ಆದ್ದರಿಂದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಈಗಾಗಲೇ ಮಾಡಲಾಗಿರುವ ಶೇಕಡಾ 15 ಕೃಪಾಂಕದ ಅವಕಾಶಗಳು ಮುಂದುವರಿಯುತ್ತದೆ. ಮೇಲೆ ಉಲ್ಲೇಖಿಸಿದ ವಿಶೇಷ ನೇಮಕಾತಿ ನಿಯಮಗಳನ್ನು ಅಂತಿಮವಾಗಿ ಜಾರಿಗೊಳಿಸುವ ಮೊದಲು ಅದರ ಕರಡು ನಿಯಮಗಳನ್ನು ಕರ್ನಾಟಕ ನಾಗರೀಕ ಸೇವಾ ಕಾಯಿದೆ 1978ರ ಪ್ರಕಾರ ರಾಜ್ಯಪತ್ರದಲ್ಲಿ ಪ್ರಕಟಿಸಿ ಅಭಾದಿತರಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಕೋರಿ 30 ದಿನಗಳ ನಂತರ, ಬಂದಿರುವ ಆಕ್ಷೇಪಣೆ ಮತ್ತು ಸಲಹೆಗಳನ್ನು ಪರಿಶೀಲಿಸಿ ಸಚಿವ ಸಂಪುಟದ ಮುಂದೆ ಆದೇಶಕ್ಕಾಗಿ ತಂದು ಹೊರಡಿಸಲಾಗಿದೆ.